



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ — بِسْمِ اللهِ الرَّحْمٰنِ الرَّحِيْمِ

1. ನಕ್ಷತ್ರದಾಣೆ - ಅದು ಅಸ್ತಮಿಸಿದಾಗ-[1] — وَالنَّجْمِ اِذَا هَوٰى ۝١
2. ನಿಮ್ಮ ಸಂಗಾತಿ ದಾರಿಗೆಡಲೂ ಇಲ್ಲ ವಂಚಿಸಲ್ಪಡಲೂ ಇಲ್ಲ.[2] — مَا ضَلَّ صَاحِبُكُمْ وَمَا غَوٰى ۝٢
3. ಅವರು ತಮ್ಮ ಸ್ವಚಿತ್ತದಿಂದ ನುಡಿಯುವುದಿಲ್ಲ. — وَمَا يَنْطِقُ عَنِ الْهَوٰى ۝٣
4. ಇದು ಅವರಿಗೆ ಅವತೀರ್ಣಗೊಳ್ಳುವಂತಹ ಒಂದು 'ದಿವ್ಯವಾಣಿ' ಆಗಿದೆ. — اِنْ هُوَ اِلَّا وَحْيٌ يُّوْحٰى ۝٤
5. ಅವರಿಗೆ ಮಹಾಶಕ್ತಿಶಾಲಿಯಾದವನು ಕಲಿಸಿರುತ್ತಾನೆ. — عَلَّمَهٗ شَدِيْدُ الْقُوٰى ۝٥
6. ಅವನು ಬಹಳ ಯುಕ್ತಿವಂತ.[3] ಅವನು ಪ್ರತ್ಯಕ್ಷನಾದನು, — ذُوْ مِرَّةٍ ۭ فَاسْتَوٰى ۝٦
7. ಅವನು ಉನ್ನತ ದಿಗಂತದಲ್ಲಿದ್ದಾಗ.[4] — وَهُوَ بِالْاُفُقِ الْاَعْلٰى ۝٧
8. ತರುವಾಯ ಅವನು ಹತ್ತಿರ ಬಂದನು ಮತ್ತು ಮೇಲೆ ತೇಲತೊಡಗಿದನು- — ثُمَّ دَنَا فَتَدَلّٰى ۝٨

---

1. ಅರ್ಥಾತ್- ಕೊನೆಯ ನಕ್ಷತ್ರವೂ ಅಸ್ತಮಿಸಿ ಉಜ್ವಲ ಪ್ರಭಾತ ಆವರಿಸಿದಾಗ.
2. ಸಂಗಾತಿಯೆಂದರೆ ಪ್ರವಾದಿವರ್ಯರು(ಸ). ಏಕೆಂದರೆ ಅವರು ಮಕ್ಕಾದ ಸತ್ಯನಿಷೇಧಿಗಳ ಪಾಲಿಗೆ ಅಪರಿಚಿತರಾಗಿರಲಿಲ್ಲ. ಬದಲಾಗಿ ಅವರು, ಅವರ ನಡುವೆಯೇ, ಹುಟ್ಟಿ ಬಾಲ್ಯದಿಂದ ತಾರುಣ್ಯಕ್ಕೆ ಮತ್ತು ತಾರುಣ್ಯದಿಂದ ಮಧ್ಯವಯಸ್ಸಿಗೆ ತಲಪಿದ್ದರು. ಒಟ್ಟಿನಲ್ಲಿ ಪ್ರವಾದಿವರ್ಯರು(ಸ) ನಿಮ್ಮ ಪಾಲಿಗೆ ಚಿರಪರಿಚಿತ ವ್ಯಕ್ತಿಯಾಗಿದ್ದಾರೆ. ಅವರು ದಾರಿಗೆಟ್ಟ ಅಥವಾ ಮೋಸಹೋದ ವ್ಯಕ್ತಿಯಲ್ಲವೆಂಬ ವಿಚಾರ ಹಗಲಿನಷ್ಟು ಸ್ಪಷ್ಟವಿದೆ.
3. ಇದರ ಅರ್ಥ ಅಲ್ಲಾಹನೆಂದಲ್ಲ. ಬದಲಾಗಿ ಜಿಬ್‌ರೀಲ್(ಅ) ಆಗಿದ್ದಾರೆ. ಮುಂದೆ ಪ್ರಸ್ತಾಪಿಸಲಾಗಿರುವ ವಿಷಯದಿಂದಲೂ ಇದು ಸ್ಪಷ್ಟವಾಗುತ್ತದೆ.
4. ದಿಗಂತವೆಂದರೆ ಸೂರ್ಯೋದಯವಾಗಿ ಹಗಲಿನ ಬೆಳಕು ಹರಿಯುವ ಪೂರ್ವ ದಿಗಂತ. ಅರ್ಥಾತ್, ಮೊಟ್ಟ ಮೊದಲ ಬಾರಿಗೆ ಹ. ಜಿಬ್‌ರೀಲ್(ಅ) ಪ್ರವಾದಿವರ್ಯರಿಗೆ(ಸ) ಕಾಣಿಸಿಕೊಂಡಾಗ ಅವರು ಆಕಾಶದ ಪೂರ್ವ ಕಿನಾರೆಯಿಂದ ಪ್ರತ್ಯಕ್ಷಗೊಂಡಿದ್ದರು.

9. ಎರಡು ಬಿಲ್ಲುಗಳಷ್ಟು ಅಥವಾ ಅದಕ್ಕಿಂತ ತುಸು ಕಡಿಮೆ ಅಂತರ ಇರುವ ತನಕ.[5]	فَكَانَ قَابَ قَوْسَيْنِ أَوْ أَدْنَىٰ ﴿٩﴾
10. ಆಗ ಅವನು ಅಲ್ಲಾಹನ ದಾಸನಿಗೆ ತಾನು ತಲಪಿಸಬೇಕಾಗಿದ್ದ ದಿವ್ಯವಾಣಿಯನ್ನು ತಲಪಿಸಿದನು.	فَأَوْحَىٰٓ إِلَىٰ عَبْدِهِۦ مَآ أَوْحَىٰ ﴿١٠﴾
11. ಕಣ್ಣು ಯಾವುದನ್ನು ಕಂಡಿತೋ, ಮನಸ್ಸು ಅದಕ್ಕೆ ಸುಳ್ಳನ್ನು ಸೇರಿಸಲಿಲ್ಲ.[6]	مَا كَذَبَ ٱلْفُؤَادُ مَا رَأَىٰٓ ﴿١١﴾
12. ನೀವೀಗ ಅವರು ಕಣ್ಣಾರೆ ಕಾಣುತ್ತಿರುವಂತಹ ವಿಷಯದ ಬಗ್ಗೆ ಅವರೊಡನೆ ಜಗಳಾಡುತ್ತೀರಾ?	أَفَتُمَٰرُونَهُۥ عَلَىٰ مَا يَرَىٰ ﴿١٢﴾
13. ಇನ್ನೊಮ್ಮೆ ಅವರು, ಆತನು ಇಳಿಯುತ್ತಿರುವುದನ್ನು ಕಂಡರು.	وَلَقَدْ رَءَاهُ نَزْلَةً أُخْرَىٰ ﴿١٣﴾
14. 'ಸಿದ್ರತಿಲ್ ಮುಂತಹಾ'[7]ದ ಬಳಿ.	عِندَ سِدْرَةِ ٱلْمُنتَهَىٰ ﴿١٤﴾
15. 'ಜನ್ನತುಲ್ ಮಲ್‌ವಾ'(ಸ್ವರ್ಗದ ನೆಲೆ) ಅದರ ಹತ್ತಿರದಲ್ಲೇ ಇದೆ.	عِندَهَا جَنَّةُ ٱلْمَأْوَىٰٓ ﴿١٥﴾
16. ಆಗ 'ಸ್ಥಿದ್‌ರ'ವನ್ನು ಕವಿದುಕೊಂಡಿದ್ದುದು ಕವಿದುಕೊಂಡಿತ್ತು-	إِذْ يَغْشَى ٱلسِّدْرَةَ مَا يَغْشَىٰ ﴿١٦﴾
17. ದೃಷ್ಟಿ ಕೋರೈಸಲೂ ಇಲ್ಲ, ಅತಿಕ್ರಮಿಸಲೂ ಇಲ್ಲ.	مَا زَاغَ ٱلْبَصَرُ وَمَا طَغَىٰ ﴿١٧﴾

5. ಅರ್ಥಾತ್- ಆಕಾಶದ ಪೂರ್ವೋನ್ನತ ದಿಗಂತದಿಂದ ಪ್ರತ್ಯಕ್ಷರಾದ ಹ. ಜಿಬ್‌ರೀಲ್(ಅ) ಪ್ರವಾದಿವರ್ಯರ(ಸ) ಕಡೆಗೆ ಮುಂದುವರಿಯಲಾರಂಭಿಸಿದರು. ಹೀಗೆ ಮುಂದುವರಿಯುತ್ತಾ ಬಂದು ಅವರು ವಾತಾವರಣದಲ್ಲಿ ತೇಲಿ ನಿಂತರು. ಅನಂತರ ಅವರು ಪ್ರವಾದಿವರ್ಯರೆಡೆಗೆ(ಸ) ಬಾಗಿದರು. ಎಲ್ಲಿಯ ವರೆಗೆಂದರೆ ಅವರ ನಡುವೆ ಎರಡು ಬಿಲ್ಲಿನಷ್ಟು ಅಥವಾ ಅದಕ್ಕಿಂತ ಸ್ವಲ್ಪ ಕಡಿಮೆ ಅಂತರ ಉಳಿಯಿತು. ಬಿಲ್ಲುಗಳೆಲ್ಲವೂ ಒಂದೇ ಗಾತ್ರದ್ದಾಗಿರುವುದಿಲ್ಲ. ಆದ್ದರಿಂದ ಅಂತರವನ್ನು ತಿಳಿಸಲಿಕ್ಕಾಗಿ ಇಲ್ಲಿ ಎರಡು ಬಿಲ್ಲುಗಳಷ್ಟು ಅಥವಾ ಸ್ವಲ್ಪ ಕಡಿಮೆ ಅಂತರವೆಂದು ಹೇಳಲಾಗಿದೆ.
6. ಹಗಲಿನ ಬೆಳಕಿನಲ್ಲಿ ಸಂಪೂರ್ಣ ಜಾಗೃತ ಸ್ಥಿತಿಯಲ್ಲಿ ತೆರೆದ ಕಣ್ಣಿನ ಮೂಲಕ ಪ್ರವಾದಿವರ್ಯರಿಗೆ(ಸ) ಈ ದರ್ಶನವಾಗಿತ್ತು. ಇದು ಕಣ್ಣಿನ ಮೋಸವೆಂದಾಗಲಿ, ಯಾವುದೇ ಜಿನ್ನ್ ಅಥವಾ ಪಿಶಾಚಿ ನನಗೆ ಕಾಣಿಸುತ್ತಿದೆಯೆಂದಾಗಲಿ, ನನ್ನ ಮುಂದೆ ಭ್ರಾಮಕ ಚಿತ್ರಣ ಮೂಡಿದೆಯೆಂದಾಗಲಿ, ಹಗಲುಗನಸೆಂದಾಗಲಿ ಅವರ ಮನಸ್ಸು ಹೇಳಿರಲಿಲ್ಲ. ಅವರ ಕಣ್ಣುಗಳು ನೋಡಿದ್ದನ್ನೇ ಅವರ ಮನಸ್ಸೂ ನೋಡಿತು. ಇದು ನಿಜವಾಗಿಯೂ ಜಿಬ್‌ರೀಲ್‌ರಾಗಿದ್ದಾರೆ(ಅ) ಮತ್ತು ಅವರು ತಲಪಿಸುವ ಸಂದೇಶ ದಿವ್ಯವಾಣಿಯೇ ಆಗಿದೆ ಎಂಬ ಬಗ್ಗೆ ಅವರಿಗೆ ಯಾವುದೇ ರೀತಿಯ ಸಂಶಯ ಉಂಟಾಗಲಿಲ್ಲ.
7. 'ಸಿದ್ರಃ' ಎಂದು ಅರಬಿ ಭಾಷೆಯಲ್ಲಿ ಬೋರೆ ಹಣ್ಣಿನ ಮರಕ್ಕೆ ಹೇಳುತ್ತಾರೆ. 'ಮುಂತಹಾ' ಎಂದರೆ 'ಕೊನೆಯ ಅಂಚು' ಎಂದಾಗಿದೆ. 'ಸಿದ್ರತಿಲ್ ಮುಂತಹಾ'ದ ಶಬ್ದಾರ್ಥ ಅತ್ಯಂತ ಕೊನೆಯ ಅಂಚಿನಲ್ಲಿರುವ ಬೋರೆ ಹಣ್ಣಿನ ಮರ ಎಂದಾಗುತ್ತದೆ. ಈ ಭೌತಿಕ ಜಗತ್ತಿನ ಕೊನೆಯ ಗಡಿಯಲ್ಲಿ ಆ ಬೋರೆಹಣ್ಣಿನ ಮರ ಹೇಗಿದೆ, ಅದರ ಸ್ವರೂಪ ಮತ್ತು ರೀತಿ ಎಂತಹದು ಎಂದು ಅಂದಾಜಿಸುವುದು ನಮಗೆ ಅತ್ಯಂತ ತ್ರಾಸದಾಯಕವಾಗಿದೆ. ಇದು ದೇವ ನಿರ್ಮಿತ ನಿಸರ್ಗದಲ್ಲಿರುವ ತಮ್ಮ ತಿಳುವಳಿಕೆಗೆ ನಿಲುಕದ ರಹಸ್ಯಗಳಾಗಿವೆ. ಒಟ್ಟಿನಲ್ಲಿ ಇದು ಅಲ್ಲಾಹನ ದೃಷ್ಟಿಯಲ್ಲಿ ಮಾನವರ ಭಾಷೆಯಲ್ಲಿರುವ 'ಸಿದ್ರಃ' ಎನ್ನುವ ಪದಕ್ಕಿಂತ ಹೆಚ್ಚು ಸೂಕ್ತವಾಗಿ ವಿವರಿಸಲಾಗದಂತಹ ಯಾವುದೋ ವಸ್ತುವಾಗಿದೆ.

18. ಮತ್ತು ಅವರು ತಮ್ಮ ಪ್ರಭುವಿನ ದೊಡ್ಡ ದೊಡ್ಡ ನಿದರ್ಶನಗಳನ್ನು ಕಂಡರು.[8]	لَقَدْ رَاٰى مِنْ اٰيٰتِ رَبِّهِ الْكُبْرٰى ﴿١٨﴾
19-20. ಈಗ ಹೇಳಿರಿ ನೀವು 'ಲಾತ್', 'ಉಝ್ಝಾ' ಮತ್ತು ಮೂರನೆಯ ದೇವಿ 'ಮನಾತ್'ನ ವಾಸ್ತವಿಕತೆಯ ಕುರಿತು ಸ್ವಲ್ಪವಾದರೂ ವಿವೇಚಿಸಿದ್ದೀರಾ?[9]	اَفَرَءَيْتُمُ اللّٰتَ وَالْعُزّٰى ﴿١٩﴾ وَمَنٰوةَ الثَّالِثَةَ الْاُخْرٰى ﴿٢٠﴾
21. ಏನು! ನಿಮಗೆ ಪುತ್ರರು ಮತ್ತು ಅಲ್ಲಾಹನಿಗೆ ಪುತ್ರಿಯರೇ?[10]	اَلَكُمُ الذَّكَرُ وَلَهُ الْاُنْثٰى ﴿٢١﴾
22. ಇದಂತೂ ದೊಡ್ಡ ದಾಂಧಲೆಯ ವಿತರಣೆಯೇ ಸರಿ.	تِلْكَ اِذًا قِسْمَةٌ ضِيْزٰى ﴿٢٢﴾
23. ನಿಜವಾಗಿ ಇವೆಲ್ಲ ನೀವು ಮತ್ತು ನಿಮ್ಮ ಪೂರ್ವಜರು ಇಟ್ಟುಕೊಂಡಿರುವ ಕೆಲವು ಹೆಸರುಗಳೇ ಹೊರತು ಇನ್ನೇನೂ ಅಲ್ಲ. ಅಲ್ಲಾಹನು ಇವುಗಳ ಪರವಾಗಿ ಯಾವ ಆಧಾರವನ್ನೂ ಇಳಿಸಿಲ್ಲ. ವಾಸ್ತವದಲ್ಲಿ ಜನರು ಕೇವಲ ಊಹೆಯನ್ನು ಅನುಸರಿಸುತ್ತಾರೆ ಮತ್ತು ಸ್ವೇಚ್ಛೆಗಳ ದಾಸರಾಗಿ ಬಿಟ್ಟಿದ್ದಾರೆ. ವಸ್ತುತಃ ಅವರ ಪ್ರಭುವಿನ ಕಡೆಯಿಂದ ಅವರ ಬಳಿಗೆ ಮಾರ್ಗ ದರ್ಶನ ಬಂದಿದೆ.	اِنْ هِيَ اِلَّآ اَسْمَآءٌ سَمَّيْتُمُوْهَآ اَنْتُمْ وَاٰبَآؤُكُمْ مَّآ اَنْزَلَ اللّٰهُ بِهَا مِنْ سُلْطٰنٍ ۭ اِنْ يَّتَّبِعُوْنَ اِلَّا الظَّنَّ وَمَا تَهْوَى الْاَنْفُسُ ۚ وَلَقَدْ جَاۗءَهُمْ مِّنْ رَّبِّهِمُ الْهُدٰى ﴿٢٣﴾
24. ಮನುಷ್ಯನ ಪಾಲಿಗೆ ತಾನಿಚ್ಛಿಸಿದ್ದೇ ಸತ್ಯವೇ?[11]	اَمْ لِلْاِنْسَانِ مَا تَمَنّٰى ﴿٢٤﴾

8. ಪ್ರವಾದಿವರ್ಯರು(ಸ) ಅಲ್ಲಾಹನನ್ನು ನೋಡಿರಲಿಲ್ಲ. ಬದಲಾಗಿ ಅಲ್ಲಾಹನ ಭವ್ಯ ನಿದರ್ಶನಗಳನ್ನು ಕಂಡಿದ್ದರೆಂದು ಈ ಸೂಕ್ತ ಸ್ಪಷ್ಟಪಡಿಸುತ್ತದೆ. ಮೊದಲನೆಯ ಬಾರಿ ಭೇಟಿಯಾದ ವ್ಯಕ್ತಿಯೊಡನೆಯೇ ಎರಡನೆಯ ಭೇಟಿಯೂ ನಡೆದಿತ್ತು ಎಂದು ಹಿನ್ನೆಲೆಯಿಂದ ತಿಳಿದುಬರುತ್ತದೆ. ಆದ್ದರಿಂದ ಅವರು ಉನ್ನತ ದಿಗಂತದಲ್ಲಿ ಮೊದಲನೇ ಬಾರಿ ಕಂಡದ್ದಾಗಲಿ, ಸಿದ್ರತುಲ್ ಮುಂತಹಾದ ಬಳಿ ಎರಡನೆಯ ಬಾರಿ ಕಂಡದ್ದಾಗಲಿ ಅಲ್ಲಾಹನನ್ನಾಗಿರಲಿಲ್ಲವೆಂದು ನಾವು ಅನಿವಾರ್ಯವಾಗಿ ಸಮ್ಮತಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಯಾವುದೇ ಹಂತದಲ್ಲಿ ಅವರು ಅಲ್ಲಾಹನನ್ನು ಕಂಡಿದ್ದರೆ ಖಂಡಿತವಾಗಿಯೂ ಅದರ ಬಗ್ಗೆ ಇಲ್ಲಿ ವಿವರಿಸಲಾಗುತ್ತಿತ್ತು. ಏಕೆಂದರೆ ಅದು ಅಷ್ಟು ಮಹತ್ವಪೂರ್ಣವಾದ ವಿಷಯವಾಗಿದೆ.
9. ಅರ್ಥಾತ್- ಪ್ರವಾದಿವರ್ಯರು(ಸ) ನಿಮಗೆ ನೀಡುತ್ತಿರುವ ಬೋಧನೆಗಳನ್ನು ನೀವು ಪಥಭ್ರಷ್ಟತೆ ಮತ್ತು ದುರ್ಮಾರ್ಗವೆನ್ನುತ್ತೀರಿ. ಇಷ್ಟಾಗಿ ಈ ಜ್ಞಾನವನ್ನು ಅವರಿಗೆ ಅಲ್ಲಾಹನ ವತಿಯಿಂದ ನೀಡಲಾಗುತ್ತಿದೆ. ಅವರು ನಿಮ್ಮ ಮುಂದೆ ಸಾಕ್ಷ್ಯ ವಹಿಸುತ್ತಿರುವ ವಿಷಯಗಳ ವಾಸ್ತವಿಕತೆಗಳನ್ನು ಅಲ್ಲಾಹನು ಅವರಿಗೆ ಕಣ್ಣಾರೆ ತೋರಿಸಿದ್ದಾನೆ. ಇನ್ನು ನೀವು ಯಾವ ವಿಶ್ವಾಸಗಳ ಪಾಲನೆಯ ಬಗ್ಗೆ ಒತ್ತಾಯಿಸುತ್ತೀದ್ದೀರೋ ಅದು ಎಷ್ಟು ಅಸಮರ್ಪಕವಾದುದೆಂದು ಸ್ವತಃ ನೋಡಿಕೊಳ್ಳಿರಿ. ಅದಕ್ಕೆ ಪ್ರತಿಯಾಗಿ ನಿಮಗೆ ಸನ್ಮಾರ್ಗ ತೋರಿಸುತ್ತಿರುವ ವ್ಯಕ್ತಿಯನ್ನು ವಿರೋಧಿಸುವ ಮೂಲಕ ಕೊನೆಗೂ ನೀವು ಯಾರಿಗೆ ನಷ್ಟ ಉಂಟು ಮಾಡುತ್ತಿದ್ದೀರಿ?
10. ಅರ್ಥಾತ್- ಈ ದೇವತೆಗಳನ್ನು ವಿಶ್ವದೊಡೆಯನ ಪುತ್ರಿಯರೆಂದು ನೀವು ಕಲ್ಪಿಸಿಕೊಂಡಿರಿ. ನೀವು ನಿಮ್ಮ ಪಾಲಿಗೆ ಪುತ್ರಿಯ ಜನನವನ್ನು ನಿಂದ್ಯತೆ ಎಂದು ಭಾವಿಸುತ್ತೀರಿ ಮತ್ತು ಗಂಡು ಮಕ್ಕಳನ್ನೇ ಅಪೇಕ್ಷಿಸುತ್ತೀರಿ. ಆದರೆ ಅಲ್ಲಾಹನಿಗೆ ಸಂತಾನವನ್ನು ಕಲ್ಪಿಸುವಾಗ ಪುತ್ರಿಯರನ್ನು ಕಲ್ಪಿಸುತ್ತೀರಿ. ಈ ಅಂಧಶ್ರದ್ಧೆಯನ್ನು ಹುಟ್ಟು ಹಾಕುವಾಗ ನೀವು ಇದನ್ನೂ ಆಲೋಚಿಸಲಿಲ್ಲವೇ?
11. ಇದರ ಇನ್ನೊಂದು ಅರ್ಥ 'ಮಾನವನಿಗೆ ಯಾರನ್ನು ಬೇಕಾದರೂ ತನ್ನ ಆರಾಧ್ಯರನ್ನಾಗಿ ಮಾಡಿಕೊಳ್ಳುವ ಅಧಿಕಾರವಿದೆಯೇ ಎಂದೂ ಆಗುತ್ತದೆ. ಮತ್ತೊಂದು ಅರ್ಥ, 'ಈ ಆರಾಧ್ಯರುಗಳಿಂದ ತನ್ನ ಇಷ್ಟಾರ್ಥ ಈಡೇರುವ ಬಗ್ಗೆ ಮಾನವ ಇಟ್ಟುಕೊಂಡಿರುವ ವಿಶ್ವಾಸಗಳು ಎಂದಾದರೂ ಈಡೇರುತ್ತವೆಯೇ?' ಎಂದೂ ಆಗುತ್ತದೆ.

25. ಈ ಲೋಕ ಹಾಗೂ ಪರಲೋಕದ ಒಡೆಯನಂತು ಅಲ್ಲಾಹನೇ ಆಗಿರುತ್ತಾನೆ.

فَلِلّٰهِ الْاٰخِرَةُ وَ الْاُوْلٰى ﴿٢٥﴾

26. ಆಕಾಶಗಳಲ್ಲಿ ಎಷ್ಟೋ ದೇವಚರರಿದ್ದಾರೆ. ಅವರ ಶಿಫಾರಸು ಸ್ವಲ್ಪವೂ ಉಪಯುಕ್ತವಾಗಲಾರದು- ಅಲ್ಲಾಹನೇ ಯಾವುದಾದರೂ ವ್ಯಕ್ತಿಯ ಪರವಾಗಿ ಮನವಿ ಕೇಳಲು ಬಯಸಿ, ಅವನ ವಿಷಯದಲ್ಲಿ ಅದನ್ನು ಅನುಮತಿಸುವ ಮತ್ತು ಅದನ್ನು ಮೆಚ್ಚಿಕೊಳ್ಳುವ ವರೆಗೆ.

وَ كَمْ مِّنْ مَّلَكٍ فِى السَّمٰوٰتِ لَا تُغْنِىْ
شَفَاعَتُهُمْ شَيْـًٔا اِلَّا مِنْۢ بَعْدِ اَنْ
يَّاْذَنَ اللّٰهُ لِمَنْ يَّشَآءُ وَ يَرْضٰى ﴿٢٦﴾

27. ಆದರೆ ಪರಲೋಕವನ್ನು ನಂಬದವರು ದೇವಚರರಿಗೆ ದೇವಿಯರ ಹೆಸರುಗಳನ್ನಿಡುತ್ತಾರೆ.

اِنَّ الَّذِيْنَ لَا يُؤْمِنُوْنَ بِالْاٰخِرَةِ
لَيُسَمُّوْنَ الْمَلٰٓئِكَةَ تَسْمِيَةَ الْاُنْثٰى ﴿٢٧﴾

28. ವಸ್ತುತಃ ಈ ಕುರಿತಾದ ಯಾವ ಜ್ಞಾನವೂ ಅವರಿಗೆ ಪ್ರಾಪ್ತವಿಲ್ಲ. ಅವರು ಕೇವಲ ಊಹೆಯನ್ನು ಅನುಸರಿಸುತ್ತಾರೆ. ಊಹೆಯು ಸತ್ಯದ ಸ್ಥಾನದಲ್ಲಿ ಯಾವ ಕೆಲಸಕ್ಕೂ ಬಾರದು.

وَ مَا لَهُمْ بِهٖ مِنْ عِلْمٍ ؕ اِنْ يَّتَّبِعُوْنَ
اِلَّا الظَّنَّ ۚ وَ اِنَّ الظَّنَّ لَا يُغْنِىْ مِنَ
الْحَقِّ شَيْـًٔا ﴿٢٨﴾

29. ಆದುದರಿಂದ ಸಂದೇಶವಾಹಕರೇ, ನಮ್ಮ ಸ್ಮರಣೆಯಿಂದ ವಿಮುಖನಾಗುವವನನ್ನು ಹಾಗೂ ಲೌಕಿಕ ಜೀವನದ ಹೊರತು ಇನ್ನೇನನ್ನೂ ಬಯಸದವನನ್ನು ಅವನ ಪಾಡಿಗೆ ಬಿಟ್ಟುಬಿಡಿರಿ.

فَاَعْرِضْ عَنْ مَّنْ تَوَلّٰى ۙ عَنْ ذِكْرِنَا
وَ لَمْ يُرِدْ اِلَّا الْحَيٰوةَ الدُّنْيَا ﴿٢٩﴾

30. ಇವರ[12] ಜ್ಞಾನ ಬಂಡವಾಳವಿಷ್ಟೆ. ಅವನ ಮಾರ್ಗದಿಂದ ಯಾರು ತಪ್ಪಿದ್ದಾನೆ ಮತ್ತು ಯಾರು ಸನ್ಮಾರ್ಗದಲ್ಲಿದ್ದಾನೆ ಎಂಬುದನ್ನು ನಿಮ್ಮ ಪ್ರಭುವೇ ಚೆನ್ನಾಗಿ ಬಲ್ಲನು.

ذٰلِكَ مَبْلَغُهُمْ مِّنَ الْعِلْمِ ؕ اِنَّ رَبَّكَ
هُوَ اَعْلَمُ بِمَنْ ضَلَّ عَنْ سَبِيْلِهٖ ۙ
وَ هُوَ اَعْلَمُ بِمَنِ اهْتَدٰى ﴿٣٠﴾

31. ಅಲ್ಲಾಹನೇ ಭೂಮಿ-ಆಕಾಶಗಳ ಸಕಲ ವಸ್ತುಗಳ ಒಡೆಯನು. (ಇದು) ದುಷ್ಕರ್ಮಿಗಳಿಗೆ[13] ಅಲ್ಲಾಹನು ಅವರ ಕರ್ಮಗಳ ಪ್ರತಿಫಲ ನೀಡುವಂತಾಗಲಿಕ್ಕಾಗಿ ಮತ್ತು ಉತ್ತಮ ಧೋರಣೆ ಅನುಸರಿಸಿದವರಿಗೆ ಉತ್ತಮ ಪ್ರತಿಫಲ ದಯಪಾಲಿಸುವಂತಾಗಲಿಕ್ಕಾಗಿ.

وَ لِلّٰهِ مَا فِى السَّمٰوٰتِ وَ مَا فِى الْاَرْضِ ۙ
لِيَجْزِىَ الَّذِيْنَ اَسَآءُوْا بِمَا عَمِلُوْا
وَ يَجْزِىَ الَّذِيْنَ اَحْسَنُوْا بِالْحُسْنٰى ﴿٣١﴾

32. ಅವರು ದೊಡ್ಡ ದೊಡ್ಡ ಪಾಪಕೃತ್ಯಗಳಿಂದ ಮತ್ತು ಬಹಿರಂಗವಾದ ಲಜ್ಜಾಸ್ಪದ ಕೃತ್ಯಗಳಿಂದ ದೂರವಿರುತ್ತಾರೆ. ಅಲ್ಪಸ್ವಲ್ಪ ನ್ಯೂನತೆಗಳು

اَلَّذِيْنَ يَجْتَنِبُوْنَ كَبٰٓئِرَ الْاِثْمِ
وَ الْفَوَاحِشَ اِلَّا اللَّمَمَ ؕ اِنَّ رَبَّكَ

12. ಇದೊಂದು ಉಪವಾಕ್ಯವಾಗಿದೆ. ವಾಕ್ಸರಣಿಯನ್ನು ಮಧ್ಯದಲ್ಲಿ ಮುರಿದು ಹಿಂದಿನ ಮಾತಿನ ಸ್ಪಷ್ಟನೆಯ ರೂಪದಲ್ಲಿ ಇದನ್ನು ಹೇಳಲಾಗಿದೆ.

13. ಇಲ್ಲಿಂದ ಮತ್ತೆ ಹಿಂದಿನಿಂದ ವಿವರಿಸಲಾದ ವಿಷಯವನ್ನೇ ಮುಂದುವರಿಸಲಾಗಿದೆ. ಅರ್ಥಾತ್ ಉಪಮಾತನ್ನು ಬಿಟ್ಟರೆ ಇಲ್ಲಿನ ಉದ್ಧರಣೆ ಹೀಗಿದೆ, "ಕೆಡುಕನ್ನೆಸಗಿದವರಿಗೆ ಅಲ್ಲಾಹನು ಅವರ ಕರ್ಮಗಳ ಪ್ರತಿಫಲ ನೀಡಲಿಕ್ಕಾಗಿ ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿರಿ."

ಅವರಿಂದ ಸಂಭವಿಸಿದರೆ ಅದು ಇದಕ್ಕೆ ಹೊರತಾಗಿದೆ. ನಿಸ್ಸಂದೇಹವಾಗಿಯೂ ನಿಮ್ಮ ಪ್ರಭುವಿನ ಕ್ಷಮಾಶೀಲತೆಯು ಬಹಳ ವಿಶಾಲವಾಗಿದೆ. ಅವನು ನಿಮ್ಮನ್ನು ಭೂಮಿಯಿಂದ ಸೃಷ್ಟಿಸಿದನು ಹಾಗೂ ನೀವು ನಿಮ್ಮ ಮಾತೆಯರ ಉದರಗಳಲ್ಲಿ ಭ್ರೂಣಾವಸ್ಥೆಯಲ್ಲಿದ್ದ ಕಾಲದಿಂದಲೇ ಅವನು ನಿಮ್ಮನ್ನು ಚೆನ್ನಾಗಿ ಬಲ್ಲನು. ಆದುದರಿಂದ ನೀವು ನಿಮ್ಮ ಆತ್ಮಶುದ್ಧತೆಯ ಬಗ್ಗೆ ಹೇಳಿಕೊಳ್ಳಬೇಡಿರಿ. ನಿಜವಾದ ಧರ್ಮನಿಷ್ಠನು ಯಾರೆಂಬುದನ್ನು ಅವನೇ ಹೆಚ್ಚು ಬಲ್ಲನು.

وَاسِعُ الْمَغْفِرَةِ ۚ هُوَ أَعْلَمُ بِكُمْ إِذْ أَنشَأَكُم مِّنَ الْأَرْضِ وَإِذْ أَنتُمْ أَجِنَّةٌ فِي بُطُونِ أُمَّهَاتِكُمْ ۖ فَلَا تُزَكُّوا أَنفُسَكُمْ ۖ هُوَ أَعْلَمُ بِمَنِ اتَّقَىٰ ﴿٣٢﴾ ع

33. ಸಂದೇಶವಾಹಕರೇ, ನೀವು ಕಂಡಿರಾ ದೇವಮಾರ್ಗದಿಂದ ವಿಮುಖನಾಗಿ ಬಿಟ್ಟವನನ್ನು-

أَفَرَأَيْتَ الَّذِي تَوَلَّىٰ ﴿٣٣﴾

34. ಮತ್ತು ಸ್ವಲ್ಪ ಮಾತ್ರ ಕೊಟ್ಟು ನಿಲ್ಲಿಸಿ ಬಿಟ್ಟವನನ್ನು?[14]

وَأَعْطَىٰ قَلِيلًا وَأَكْدَىٰ ﴿٣٤﴾

35. ಅವನು ಸತ್ಯವನ್ನು ಕಾಣಲು, ಅವನ ಬಳಿ ಅದೃಶ್ಯದ ಜ್ಞಾನ ಇದೆಯೇ?

أَعِندَهُ عِلْمُ الْغَيْبِ فَهُوَ يَرَىٰ ﴿٣٥﴾

36-37. ಮೂಸಾರ ಗ್ರಂಥಗಳಲ್ಲಿ ಮತ್ತು ನಿಷ್ಠೆಯ ಋಣ ತೀರಿಸಿದ ಇಬ್‌ರಾಹೀಮ್‌ರ ಗ್ರಂಥಗಳಲ್ಲಿ ತಿಳಿಸಲಾಗಿರುವ ವಿಷಯಗಳ ಬಗ್ಗೆ ಯಾವ ಸುದ್ದಿಯೂ ಅವನಿಗೆ ತಲುಪಿಲ್ಲವೇ?[15]

أَمْ لَمْ يُنَبَّأْ بِمَا فِي صُحُفِ مُوسَىٰ ﴿٣٦﴾
وَإِبْرَاهِيمَ الَّذِي وَفَّىٰ ﴿٣٧﴾

38. (ಅದೇನೆಂದರೆ) ಯಾವ ಹೊರೆ ಹೊರುವಾತನೂ ಇನ್ನೊಬ್ಬನ ಹೊರೆ ಹೊರಲಾರನು.[16]

أَلَّا تَزِرُ وَازِرَةٌ وِزْرَ أُخْرَىٰ ﴿٣٨﴾

39. ಮನುಷ್ಯನು ತಾನೇ ಪರಿಶ್ರಮಿಸಿದುದರ ಹೊರತು ಅವನಿಗೆ ಬೇರೇನೂ ಇಲ್ಲ.[17]

وَأَن لَّيْسَ لِلْإِنسَانِ إِلَّا مَا سَعَىٰ ﴿٣٩﴾

14. ಇದು ಕುರೈಶರ ದೊಡ್ಡ ಸರದಾರರಲ್ಲೊಬ್ಬನಾಗಿದ್ದ ವಲೀದ್ ಬಿನ್ ಮುಗೀರನ ಕಡೆಗಿರುವ ಸೂಚನೆ. ಈ ವ್ಯಕ್ತಿ ಮೊದಲು ಪ್ರವಾದಿವರ್ಯರ(ಸ) ಸಂದೇಶವನ್ನು ಸ್ವೀಕರಿಸಲು ಸನ್ನದ್ಧನಾಗಿದ್ದನು. ಆದರೆ ಅವನು ಮುಸ್ಲಿಮನಾಗುವ ಸಂಕಲ್ಪ ಹೊಂದಿರುವುದು ಅವನ ಬಹುದೇವಾರಾಧಕ ಮಿತ್ರನೊಬ್ಬನಿಗೆ ತಿಳಿದಾಗ ಅವನು ಹೇಳಿದನು, 'ನೀನು ಪಿತ್ರಾರ್ಜಿತ ಧರ್ಮವನ್ನು ತೊರೆಯಬೇಡ. ನಿನಗೆ ಯಾತನೆಯ ಭಯವಿದ್ದರೆ ನನಗೆ ಇಂತಿಷ್ಟು ಮೊತ್ತವನ್ನು ಕೊಟ್ಟು ಬಿಡು. ನಾನು ನಿನ್ನ ಬದಲಿಗೆ ಅಲ್ಲಿನ ಯಾತನೆಯನ್ನು ಸ್ವೀಕರಿಸುವ ಹೊಣೆ ವಹಿಸುತ್ತೇನೆ, ವಲೀದ್ ಈ ಮಾತನ್ನು ಸಮ್ಮತಿಸಿ ದೇವಮಾರ್ಗಕ್ಕೆ ಹತ್ತಿರ ಬಂದವನು ಅದರಿಂದ ವಿಮುಖನಾದನು. ಅವನು ತನ್ನ ಬಹುದೇವಾರಾಧಕ ಮಿತ್ರನಿಗೆ ಕೊಡುತ್ತೇನೆಂದು ಹೇಳಿದ್ದ ಮೊತ್ತದಲ್ಲೂ ಸ್ವಲ್ಪವನ್ನೇ ಕೊಟ್ಟು ಉಳಿದುದನ್ನು ತಡೆಹಿಡಿದನು.

15. ಮುಂದೆ ಹ. ಮೂಸಾ ಮತ್ತು ಹ. ಇಬ್‌ರಾಹೀಮ್‌ರ(ಅ) ಗ್ರಂಥಗಳ ಮೂಲಕ ಅವತೀರ್ಣಗೊಂಡಿದ್ದ ಬೋಧನೆಗಳ ಸಾರಾಂಶವನ್ನು ವಿವರಿಸಲಾಗುತ್ತಿದೆ.

16. ಅರ್ಥಾತ್- ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕರ್ಮಗಳಿಗೆ ಹೊಣೆಗಾರನಾಗಿದ್ದಾನೆ. ಒಬ್ಬ ವ್ಯಕ್ತಿಯ ಮೇಲಿನ ಹೊಣೆಯನ್ನು ಇನ್ನೊಬ್ಬನ ಮೇಲೆ ಹೇರಲಾಗುವುದಿಲ್ಲ. ನಿಜವಾದ ಅಪರಾಧಿಯನ್ನು ಅವನ ಜಾಗದಲ್ಲಿ ಶಿಕ್ಷೆ ಅನುಭವಿಸಲು ಇನ್ನೊಬ್ಬ ತಯಾರಾಗಿದ್ದಾನೆ ಎಂಬ ಕಾರಣಕ್ಕಾಗಿ ಬಿಟ್ಟು ಬಿಡಲಾಗುವುದಿಲ್ಲ.

40. ಮತ್ತು ಅವನ ಪರಿಶ್ರಮವನ್ನು ಸದ್ಯವೇ ನೋಡಲಾಗುವುದು.

وَأَنَّ سَعْيَهُ سَوْفَ يُرَىٰ ﴿٤٠﴾

41. ಅನಂತರ ಅವನ ಸಂಪೂರ್ಣ ಪ್ರತಿಫಲವನ್ನು ಕೊಡಲಾಗುವುದು-

ثُمَّ يُجْزَاهُ الْجَزَاءَ الْأَوْفَىٰ ﴿٤١﴾

42. ಅಂತಿಮವಾಗಿ ತಲುಪಲಿಕ್ಕಿರುವುದು ನಿಮ್ಮ ಪ್ರಭುವಿನ ಕಡೆಗೇ ಆಗಿದೆ.

وَأَنَّ إِلَىٰ رَبِّكَ الْمُنْتَهَىٰ ﴿٤٢﴾

43. ಅವನೇ ನಗಿಸಿದನು ಮತ್ತು ಅವನೇ ಅಳುವಂತೆ ಮಾಡಿದನು-[18]

وَأَنَّهُ هُوَ أَضْحَكَ وَأَبْكَىٰ ﴿٤٣﴾

44. ಅವನೇ ಮರಣ ಕೊಟ್ಟನು ಮತ್ತು ಅವನೇ ಜೀವಂತಗೊಳಿಸಿದನು.

وَأَنَّهُ هُوَ أَمَاتَ وَأَحْيَا ﴿٤٤﴾

45-46. ಒಂದು ಹನಿಯು ತೊಟ್ಟಿಕ್ಕುವಾಗ, ಅವನೇ ಅದರಿಂದ ಗಂಡು ಮತ್ತು ಹೆಣ್ಣುಗಳ ಜೊತೆಯನ್ನುಂಟು ಮಾಡಿದನು.

وَأَنَّهُ خَلَقَ الزَّوْجَيْنِ الذَّكَرَ
وَالْأُنْثَىٰ ﴿٤٥﴾ مِنْ نُطْفَةٍ إِذَا تُمْنَىٰ ﴿٤٦﴾

47. ಇನ್ನೊಂದು ಜೀವನ ಪ್ರದಾನ ಮಾಡುವುದೂ ಅವನ ಹೊಣೆಗಾರಿಕೆಯಾಗಿದೆ-

وَأَنَّ عَلَيْهِ النَّشْأَةَ الْأُخْرَىٰ ﴿٤٧﴾

48. ಅವನೇ ಶ್ರೀಮಂತಗೊಳಿಸಿದನು ಮತ್ತು ಆಸ್ತಿಪಾಸ್ತಿ ನೀಡಿದನು-

وَأَنَّهُ هُوَ أَغْنَىٰ وَأَقْنَىٰ ﴿٤٨﴾

49. ಅವನೇ 'ಶಿಅ್‌ರಾ' ನಕ್ಷತ್ರದ ಪ್ರಭು-[19]

وَأَنَّهُ هُوَ رَبُّ الشِّعْرَىٰ ﴿٤٩﴾

50. ಅವನೇ ಪ್ರಥಮ 'ಆದ್' ಜನಾಂಗವನ್ನು ನಾಶಗೊಳಿಸಿದನು-

وَأَنَّهُ أَهْلَكَ عَادًا الْأُولَىٰ ﴿٥٠﴾

51. ಮತ್ತು 'ಸಮೂದ್' ಜನಾಂಗವನ್ನು, ಅವರಲ್ಲಿ ಯಾರೂ ಉಳಿಯದಂತೆ ಅಳಿಸಿಬಿಟ್ಟನು-

وَثَمُودَ فَمَا أَبْقَىٰ ﴿٥١﴾

52. ಅವರಿಗಿಂತ ಮುಂಚೆ 'ನೂಹ'ರ ಜನಾಂಗವನ್ನು, ನಾಶಗೊಳಿಸಿದನು. ಏಕೆಂದರೆ, ಅವರು ಮಹಾ ಅಕ್ರಮಿಗಳು ಮತ್ತು ವಿದ್ರೋಹಿಗಳೇ ಆಗಿದ್ದರು.

وَقَوْمَ نُوحٍ مِنْ قَبْلُ ۖ إِنَّهُمْ كَانُوا
هُمْ أَظْلَمَ وَأَطْغَىٰ ﴿٥٢﴾

17. ಅರ್ಥಾತ್- ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕರ್ಮಗಳ ಪ್ರತಿಫಲವನ್ನಷ್ಟೇ ಪಡೆಯುವನು. ಒಬ್ಬ ವ್ಯಕ್ತಿಯ ಕರ್ಮಫಲ ಇನ್ನೊಬ್ಬನಿಗೆ ದೊರೆಯಲು ಸಾಧ್ಯವಿಲ್ಲ. ಪ್ರಯತ್ನ ಮತ್ತು ಕರ್ಮಗಳ ಹೊರತು ಯಾವ ವ್ಯಕ್ತಿಗೂ ಏನನ್ನೂ ಪಡೆಯಲು ಸಾಧ್ಯವಿಲ್ಲ.

18. ಅರ್ಥಾತ್- ಸುಖ-ದುಃಖಗಳೆರಡರ ಕಾರಣಗಳು ಅವನಿಂದಲೇ ಆಗಿವೆ. ಅದೃಷ್ಟ-ದುರದೃಷ್ಟಗಳೆಲ್ಲವೂ ಅವನ ಕೈಯಲ್ಲೇ ಇವೆ. ಅದೃಷ್ಟವನ್ನು ರೂಪಿಸುವಲ್ಲಿ ಅಥವಾ ಕೆಡಿಸುವಲ್ಲಿ ಹಸ್ತಕ್ಷೇಪ ಮಾಡಬಲ್ಲಂತಹ ಬೇರಾವ ಶಕ್ತಿಯೂ ಈ ವಿಶ್ವದಲ್ಲಿಲ್ಲ.

19. 'ಶಿಅ್‌ರಾ' ಎಂದರೆ ಆಕಾಶದ ಅತ್ಯುಜ್ವಲ ನಕ್ಷತ್ರ. ಈ ನಕ್ಷತ್ರ ಮಾನವರ ಅದೃಷ್ಟವನ್ನು ಪ್ರಭಾವಿತಗೊಳಿಸುತ್ತದೆ ಎಂದು ಈಜಿಪ್ಟ್ ಮತ್ತು ಅರಬ್ ನಿವಾಸಿಗಳು ವಿಶ್ವಾಸವಿಡುತ್ತಿದ್ದರು. ಈ ಕಾರಣದಿಂದಲೇ ಅವರು ನೆಚ್ಚಿಕೊಂಡಿದ್ದ ಆರಾಧ್ಯರುಗಳಲ್ಲಿ ಇದೂ ಸೇರಿತ್ತು.

53. ಅಧೋಮುಖವಾಗಿ ಬೀಳುತ್ತಿದ್ದ ನಾಡುಗಳನ್ನು ಅವನು ಕಿತ್ತೆಸೆದನು-

وَالْمُؤْتَفِكَةَ أَهْوَىٰ ﴿٥٣﴾

54. ತರುವಾಯ ಅವರ ಮೇಲೆ (ನಿಮಗೆ ತಿಳಿದಿರುವಂತೆ) ಏನನ್ನು ಆವರಿಸಿದನೋ ಅದನ್ನು ಆವರಿಸಿಬಿಟ್ಟನು.[20]

فَغَشَّاهَا مَا غَشَّىٰ ﴿٥٤﴾

55. ಆದುದರಿಂದ ಎಲೈ ಮಾನವಾ, ನಿನ್ನ ಪ್ರಭುವಿನ ಯಾವ ಯಾವ ಅನುಗ್ರಹಗಳ ಬಗ್ಗೆ ನೀನು ಸಂಶಯ ಪಡುವೆ?

فَبِأَيِّ آلَاءِ رَبِّكَ تَتَمَارَىٰ ﴿٥٥﴾

56. ಇದು, ಈ ಹಿಂದೆ ಬಂದಿದ್ದ ಎಚ್ಚರಿಕೆಗಳ ಪೈಕಿ ಒಂದು ಎಚ್ಚರಿಕೆಯಾಗಿದೆ.

هَٰذَا نَذِيرٌ مِّنَ النُّذُرِ الْأُولَىٰ ﴿٥٦﴾

57. ಬರಲಿರುವ ಘಳಿಗೆಯು ಸನ್ನಿಹಿತವಾಗಿದೆ.

أَزِفَتِ الْآزِفَةُ ﴿٥٧﴾

58. ಅಲ್ಲಾಹನ ಹೊರತು ಯಾರೂ ಅದನ್ನು ಸರಿಸುವವನಿಲ್ಲ.

لَيْسَ لَهَا مِن دُونِ اللَّهِ كَاشِفَةٌ ﴿٥٨﴾

59. ನೀವೀಗ ಇದೇ ವಿಷಯಗಳ ಬಗ್ಗೆ ಅಚ್ಚರಿಪಡುತ್ತಿರುವುದೇ?

أَفَمِنْ هَٰذَا الْحَدِيثِ تَعْجَبُونَ ﴿٥٩﴾

60. ನಗುತ್ತೀರಾ? ಅಳುವುದಿಲ್ಲವೇ?

وَتَضْحَكُونَ وَلَا تَبْكُونَ ﴿٦٠﴾

61. ಹಾಡಿ ನಲಿದು ಇವುಗಳನ್ನು ತಳ್ಳಿ ಹಾಕುತ್ತೀರಾ?

وَأَنتُمْ سَامِدُونَ ﴿٦١﴾

62. ಅಲ್ಲಾಹನ ಮುಂದೆ ಸಾಷ್ಟಾಂಗವೆರಗಿರಿ ಮತ್ತು ಅವನ ದಾಸ್ಯ ಕೈಗೊಳ್ಳಿರಿ.

فَاسْجُدُوا لِلَّهِ وَاعْبُدُوا ۩ ﴿٦٢﴾ ع

20. 'ಅಧೋಮುಖವಾಗಿ ಬಿದ್ದ ನಾಡು'ಗಳೆಂದರೆ, ಹ. ಲೂತ್‌ರ(ಅ) ಜನಾಂಗದ ನಾಡುಗಳಾಗಿವೆ. "ಏನನ್ನು ಆವರಿಸಿದೆವೋ ಅದನ್ನು ಆವರಿಸಿದೆವು" ಎಂದು ಪ್ರಾಯಶಃ ಮೃತ ಸಾಗರದ ನೀರಿನ ಕುರಿತು ಹೇಳಿರಬೇಕು. ಪ್ರಸ್ತುತ ನಾಡುಗಳು ಭೂಮಿಯಲ್ಲಿ ಹೂತು ಹೋದ ಬಳಿಕ ನೀರು ಅದರ ಮೇಲೆ ಹರಡಿಬಿಟ್ಟಿತು. ಇಂದಿಗೂ ಅದು ಆ ಪ್ರದೇಶದಾದ್ಯಂತ ಹರಡಿಕೊಂಡಿದೆ.